ಉಪಾಧ್ಯಕ್ಷರು: ಮುಖ್ಯಮಂತ್ರಿಗಳು ನಾಳೆ ಬರುತ್ತಾರೆ, Finance Minister ಬರುತ್ತಾರೆ, ಅವರಿಬ್ಬರೂ ಚರ್ಚೆ ಮಾಡಿಬಿಟ್ಟು ಒಂದು ದಿವಸ ನಿಗದಿ ಮಾಡುತ್ತೇನೆಂದು ಹೇಳಿದ್ದಾರಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ: ಸನ್ಮಾನ್ಯ ಯಡಿಯೂರಪ್ಪನವರು ನಮ್ಮ ಸಮಕ್ಷಮ ಎಲ್ಲರಿಗೂ ಮಾತು ಕೊಟ್ಟಿದ್ದರು. ಉದಾಸಿಯವರ ಜೊತೆ ಅವರೂ ಇದ್ದರು. Finance Minister ರವರನ್ನು ಕರೆಸಿಬಿಟ್ಟು ಅವರಿಂದ ಒಂದು ಮಾತು ಕೊಡಿಸಬೇಕು. ಅವರು ಅವತ್ತು ಹೇಳಿದ್ದಾರೆ. ನಾನು ಸರಿ ಮಾಡುತ್ತೇನೆ ಎಂದು ಹೇಳಿದ್ದಾರೆ. ಅವರನ್ನು ಕರೆಸಿ.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರು ಸದನದ ಬಾವಿಗೆ ಬಂದರು)

(ಅಡಚಣೆ)

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಇದಕ್ಕೆ ಈಗ ಸರಿಯಾದ ಉತ್ತರ ಕೊಡಬೇಕು.

ಶ್ರೀ ಎನ್. ಧರ್ಮಸಿಂಗ್: ಮೊದಲೂ ಕೂಡ ಈ ಸದನದಲ್ಲಿ ಚರ್ಚೆಯಾಗಿದೆ. ಆ ಸಂದರ್ಭದಲ್ಲಿ ಉದಾಸಿಯವರು ನಿಖರವಾಗಿ, "ನಾನು ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುತ್ತೇನೆ, ಈ ರಾಜ್ಯದಲ್ಲಿರತಕ್ಕಂಥ ಪ್ರತಿ ಕ್ಷೇತ್ರಕ್ಕೆ ಸರಿಯಾದ ರೀತಿಯಲ್ಲಿ ಹಣ ಕೊಡುತ್ತೇವೆನ್ನ"ತಕ್ಕಂಥ ಮಾತನ್ನು ಹೇಳಿದ್ದಾರೆ. ಇವತ್ತೇನು ಈ ಸಭೆಯಲ್ಲಿ ಪ್ರಶ್ನೆಯನ್ನೆತ್ತಿದ್ದಾರೆ, ಇದಕ್ಕೆ ಈ ರೀತಿಯಾಗಿ ನಾವು ಹಾರಿಕೆಯ ಉತ್ತರ ಕೊಟ್ಟರೆ ಸಮಾಧಾನವಾಗುದಿಲ್ಲ. ಇದರ ಬಗ್ಗೆ ನಾವು ಪ್ರತಿಭಟನೆ ಮಾಡುತ್ತೇವೆ. ಪ್ರತಿಭಟನೆ ಮಾಡತಕ್ಕಂಥ ರೀತಿಯಲ್ಲಿ ನಮ್ಮೆಲ್ಲಾ ಶಾಸಕರೂ ಕೂಡ ಇವತ್ತು ಧರಣಿ ಮಾಡುತ್ತೇವೆ.

(ಅಡಚಣೆ)

ಶ್ರೀ ಎಂ.ಪಿ. ವೆಂಕಟೇಶ್: ಸಚಿವರು ಹೇಳಿದ್ದಾರೆ. ಅವರು ಭರವಸೆ ಕೊಟ್ಟಿದ್ದಾರೆ. ಆದರೂ ಇವರ ನಡವಳಿಕೆಗಳು ಸರಿ ಇಲ್ಲ.

MR. DEPUTY SPEAKER: Finance Minister ರವರನ್ನು ಕರೆಸಿ.

ಶ್ರೀ ಎಂ.ಪಿ. ವೆಂಕಟೇಶ್: ಪ್ರತಿಯೊಂದಕ್ಕೂ ಇವರು ಸತ್ಯಾಗ್ರಹ ಮಾಡುತ್ತಾರೆ.

ಉಪಾಧ್ಯಕ್ಷರು: ಮಾನ್ಯ ಉದಾಸಿಯವರೆ, ಏನಾದರೂ ಒಂದು ಉತ್ತರ ಕೊಡಿ.

(ಅಡಚಣೆ)

ಶ್ರೀ ಸಿ.ಎಂ. ಉದಾಸಿ: ಇವರೆಲ್ಲಾ ಈಗಲೂ ಒಂದು ಮಾತನ್ನು ಹೇಳಿದರು. ಸನ್ಮಾನ್ಯ ಕೆ.ಎಂ. ಕೃಷ್ಣಮೂರ್ತಿಯವರು ಒಂದು ಮಾತನ್ನು ಹೇಳಿದರು.

(ಅಡಚಣೆ)

ಉಪಾಧ್ಯಕ್ಷರು: ಈಗ ಕೇಳಿಸುತ್ತಿಲ್ಲ. ಒಂದು ನಿಮಿಷ ಸುಮ್ಮನಿರಿ.

ಉಪಾಧ್ಯಕ್ಷರು: ಅವರೇನು ಹೇಳುತ್ತಾರೆ ಒಂದು ನಿಮಿಷ ಕೇಳೋಣ ಇರಿ.